# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಶ್ರೀಮತಿ ರತ್ನಮ್ಮ ಗಂಡ ತಿಪ್ಪಣ್ಣ ಸಾ॥ ತುರುಕನದೊಡ್ಡಿ, ಅಧ್ಯಕ್ಷರು, ಅಜಾಲಪೂರ ಗ್ರಾಮ ಪಂಚಾಯಿತಿ, ಯಾದಗಿರಿ ತಾಲ್ಲೂಕು, ಯಾದಗಿರಿ ಜಿಲ್ಲೆ ಇವರ ವಿರುದ್ಧ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993 ರ ಪ್ರಕರಣ 43(ಎ) ರನ್ವಯ ಕ್ರಮ ಕೈಗೊಳ್ಳುವ ಬಗ್ಗೆ.

**ಓದಲಾಗಿದೆ:**

1. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯಿತಿ, ಯಾದಗಿರಿ ಜಿಲ್ಲೆ ರವರ ಪತ್ರ ಸಂಖ್ಯೆ: ಜಿಪಂಯಾ:ಗ್ರಾಪಂ:ಸಿಬ್ಬಂದಿ-2:2016-17/4458, ದಿನಾಂಕ: 03-03-2017.
2. ಸರ್ಕಾರಧ ಪತ್ರ ಸಂಖ್ಯೆ: ಗ್ರಾಅಪ 392 ಗ್ರಾಪಂಅ 2017, ದಿನಾಂಕ:06-04-2017 ರ ಕಾರಣ ಕೇಳುವ ನೋಟೀಸ್.
3. ಶ್ರೀಮತಿ ರತ್ನಮ್ಮ ಗಂಡ ತಿಪ್ಪಣ್ಣ ಸಾ॥ ತುರುಕನದೊಡ್ಡಿ, ಅಧ್ಯಕ್ಷರು, ಅಜಾಲಪೂರ ಗ್ರಾಮ ಪಂಚಾಯಿತಿ, ಇವರು ಕಾರಣ ಕೇಳುವ ನೋಟಿಸ್‌ಗೆ ನೀಡಿರುವ ಲಿಖಿತ ಹೇಳಿಕೆ ದಿನಾಂಕ: 24-04-2017.
4. ಇದೇ ಸಮಸಂಖ್ಯೆಯ ವಿಚಾರಣಾ ನೋಟೀಸಿನ ದಿನಾಂಕ: 06-07-2017, ವಿಚಾರಣೆ ನಡೆದ ದಿನಾಂಕ: 15-07-2017.
5. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/392/ಗ್ರಾಪಂಅ/2017, ದಿನಾಂಕ: 16-02-2018.
6. ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯ ಕಲಬುರಗಿ ಪೀಠ, ಆದೇಶದಂತೆ ಮರು ವಿಚಾರಣೆ ನಡೆದ ದಿನಾಂಕ: 06-07-2019.

**ಪ್ರಸ್ತಾವನೆ:**

ಮೇಲೆ ಓದಲಾದ ಕ್ರಮ ಸಂಖ್ಯೆ (1) ರಲ್ಲಿ ಶ್ರೀಮತಿ ರತ್ನಮ್ಮ ಗಂಡ ತಿಪ್ಪಣ್ಣ ಸಾ॥ ತುರುಕನದೊಡ್ಡಿ, ಅಧ್ಯಕ್ಷರು, ಅಜಾಲಪೂರ ಗ್ರಾಮ ಪಂಚಾಯಿತಿ, ಯಾದಗಿರಿ ತಾಲ್ಲೂಕು, ಯಾದಗಿರಿ ಜಿಲ್ಲೆ ಇವರು ಇವರು 13ನೇ ಹಣಕಾಸು ಮತ್ತು ಕರವಸೂಲಿ ಯೋಜನೆಯಲ್ಲಿ ಗ್ರಾಮ ಪಂಚಾಯಿತಿಯಿಂದ ಬಿಡುಗಡೆಯಾದ ಅನುದಾನವನ್ನು ತಮ್ಮ ಮಗನಾದ ಶ್ರೀ ಭೀಮರಾಯ ತಿಪ್ಪಣ್ಣ ಸಾ॥ ತುರುಕನದೊಡ್ಡಿ, ಹೆಸರಿನಲ್ಲಿ ಚೆಕ್ ಪಡೆದು ತಮ್ಮ ಬ್ಯಾಂಕ್ ಖಾತೆ ಮೂಲಕ ನಗದೀಕರಿಸಿಕೊಂಡಿರುತ್ತಾರೆ ಆದ್ದರಿಂದ ಇವರ ವಿರುದ್ಧ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂ.ರಾಜ್ ಅಧಿನಿಯಮ 43(ಎ) ರನ್ವಯ ಸದಸ್ಯತ್ವ ರದ್ದುಪಡಿಸುವಂತೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ಯಾದಗಿರಿ ಜಿಲ್ಲೆ ರವರು ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ (2) ರಲ್ಲಿ ಸದರಿಯವರ ವಿರುದ್ಧ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಕಾಯ್ದೆ 1993 ರ ಪ್ರಕರಣ 43(ಎ) ರಡಿ ಕ್ರಮವಹಿಸುವ ಪೂರ್ವದಲ್ಲಿ ನಿಯಮಾನುಸಾರ ಕಾರಣ ಕೇಳುವ ನೋಟೀಸನ್ನು ದಿನಾಂಕ: 06-04-2017 ರಂದು ಜಾರಿ ಮಾಡಲಾಗಿದ್ದು, ಮೇಲೆ ಓದಲಾದ ಕ್ರಮ ಸಂಖ್ಯೆ (3) ರಂತೆ ಆರೋಪಿತ ಅಧ್ಯಕ್ಷರು ಕಾರಣ ಕೇಳುವ ನೋಟೀಸಿಗೆ ಸಮಜಾಯಿಷಿಯನ್ನು ಸಲ್ಲಿಸಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ (4) ರಲ್ಲಿ ಮಾನ್ಯ ಪ್ರಧಾನ ಕಾರ್ಯದರ್ಶಿಯವರ ನ್ಯಾಯಾಲಯದಲ್ಲಿ ವಿಚಾರಣೆ ನಡೆಸಿ ಆಪಾದಿತರ ಹೇಳಿಕೆಯನ್ನು ಪಡೆದು, ದಾಖಲೆಗಳನ್ನು ಪರಿಶೀಲಿಸಿ ಆಪಾದಿತ ಅಧ್ಯಕ್ಷರಾದ ಶ್ರೀಮತಿ ರತ್ನಮ್ಮ ಗಂಡ ತಿಪ್ಪಣ್ಣ ಸಾ॥ ತುರುಕನದೊಡ್ಡಿ, ಅಧ್ಯಕ್ಷರು, ಅಜಾಲಪೂರ ಗ್ರಾಮ ಪಂಚಾಯಿತಿ, ಇವರನ್ನು ಮೇಲೆ ಓದಲಾದ ಕ್ರಮ ಸಂಖ್ಯೆ (5) ರಲ್ಲಿ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಕಾಯ್ದೆ 1993 ರ ಪ್ರಕರಣ 43(ಎ) ರನ್ವಯ ಗ್ರಾಮ ಪಂಚಾಯಿತಿ ಸದಸ್ಯ ಸ್ಥಾನದಿಂದ ತೆಗೆದುಹಾಕಿ ಆದೇಶಿಸಲಾಗಿತ್ತು. ಸದರಿ ಆದೇಶದ ವಿರುದ್ಧ ಶ್ರೀಮತಿ ರತ್ನಮ್ಮ ಗಂಡ ತಿಪ್ಪಣ್ಣ, ಅಧ್ಯಕ್ಷರು ರವರು ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯ, ಕಲಬುರಗಿ ಪೀಠದಲ್ಲಿ ಹೂಡಿರುವ ರಿಟ್ ಅಪೀಲ್ ಸಂಖ್ಯೆ: 200570/2018, ದಿನಾಂಕ: 11.02.2019ರ ಆದೇಶದಲ್ಲಿ ಮಾನ್ಯ ಉಚ್ಚ ನ್ಯಾಯಾಲಯವು ಸರ್ಕಾರದ ಆದೇಶ ದಿನಾಂಕ: 16.02.2018 ನ್ನು ರದ್ದುಗೊಳಿಸಿದೆ ಹಾಗೂ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ ಪ್ರಕರಣ 43(ಎ) ಮತ್ತು 48(4) ರನ್ವಯ ನಿಯಮಾನುಸಾರ ಪರಿಶೀಲಿಸುವಂತೆ ಆದೇಶಿಸಿದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (6) ರಲ್ಲಿ ಮಾನ್ಯ ಉಚ್ಚ ನ್ಯಾಯಾಲಯದ ಆದೇಶದಂತೆ ಶ್ರೀಮತಿ ರತ್ನಮ್ಮ ಗಂಡ ತಿಪ್ಪಣ್ಣ, ಅಧ್ಯಕ್ಷರು, ಅಜಾಲಪೂರ ಗ್ರಾಮ ಪಂಚಾಯಿತಿ, ರವರಿಗೆ ಮರು ವಿಚಾರಣೆಗೆ ಹಾಜರಾಗುವಂತೆ ತಿಳಿಸಲಾಗಿತ್ತು. ಅದರಂತೆ ಮಾನ್ಯ ಪ್ರಧಾನ ಕಾರ್ಯದರ್ಶಿ ನ್ಯಾಯಾಲಯದಲ್ಲಿ ನಡೆದ ವಿಚಾರಣೆಯಲ್ಲಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ಯಾದಗಿರಿ ಜಿಲ್ಲೆ ರವರ ವರದಿ ಹಾಗೂ ದಾಖಲೆಗಳನ್ನು ಪರಿಶೀಲಿಸಲಾಯಿತು ಮತ್ತು ಆಪಾದಿತ ಅಧ್ಯಕ್ಷರ ಹೇಳಿಕೆಯನ್ನು ಪಡೆದು ದಾಖಲಿಸಿಕೊಳ್ಳಲಾಯಿತು. ವಿಚಾರಣಾ ಸಮಯದಲ್ಲಿ ಶ್ರೀಮತಿ ರತ್ನಮ್ಮ ಗಂಡ ತಿಪ್ಪಣ್ಣ, ಅಧ್ಯಕ್ಷರು ಚೆಕ್‌ನ್ನು ತಮ್ಮ ಮಗನ ಹೆಸರಿಗೆ ಸಹಿ ಮಾಡಿ ನೀಡಲಾಗಿದೆ ಎಂದು ಒಪ್ಪಿಕೊಂಡಿರುತ್ತಾರೆ.

ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993 ರ ಪ್ರಕರಣ 43(1)(V) ರನ್ವಯ ಪಂಚಾಯತ್‌ನ ಯಾವುದೇ ಬೇರೆ ರೀತಿಯ ಕಾಮಗಾರಿಯನ್ನು ಕಾರ್ಯಗತಗೊಳಿಸುವಾಗ ಕರಾರು ಸಂಬಂಧ ಅಥವಾ ಕಾಮಗಾರಿಗಳಿಗೆ ಸಂಬಂಧಿಸಿದ ಯಾವುದೇ ವ್ಯವಹಾರದಲ್ಲಿ ಕುಟುಂಬದ ಹತ್ತಿರದ ಸಂಬಂಧಿಕರಾಗಿರುವ ಯಾವೊಬ್ಬ ವ್ಯಕ್ತಿಯೊಂದಿಗೆ ಪ್ರತ್ಯಕ್ಷವಾಗಿ ತೊಡಗಿಕೊಂಡಿರುವುದು ಕಂಡು ಬಂದರೆ ಅಥವಾ ಪಾಲುದಾರರದಂತೆ, ನೌಕರನಂತೆ ಅಥವಾ ಅಂಥ ಅನ್ಯಥ ಸಂಘ ಸಂಸ್ಥೆ ಮಂಡಲಿಯಲ್ಲಿ ಸದಸ್ಯನಂತೆ ಸಹಭಾಗಿಯಾಗಿರುವನೆಂದು, ಕಂಡು ಬಂದರೆ ಅವನಿಗೆ ಅಹವಾಲನ್ನು ಹೇಳಿಕೊಳ್ಳಲು ಅವಕಾಶ ನೀಡಿದ ನಂತರ ಮತ್ತು ಅಗತ್ಯವೆಂದು ತಾನು ಭಾವಿಸಿದಂಥ ವಿಚಾರಣೆ ಮಾಡಿದ ನಂತರ ತೆಗೆದು ಹಾಕುವುದು ಸೂಕ್ತವೆಂದು ಭಾವಿಸಿದ್ದಾರೆ ಆ ಸದಸ್ಯನನ್ನು ಆತನ ಸದಸ್ಯತ್ವದಿಂದ ತೆಗೆದು ಹಾಕಬಹುದು ಎಂದು ತಿಳಿಸಿದೆ.

ಲಭ್ಯವಿರುವ ಎಲ್ಲಾ ದಾಖಲಾತಿಗಳನ್ನು ಪರಿಶೀಲಿಸಲಾಗಿ, 13ನೇ ಹಣಕಾಸು ಮತ್ತು ಕರವಸೂಲಿ ಯೋಜನೆಯಲ್ಲಿ ಗ್ರಾಮ ಪಂಚಾಯಿತಿಯಿಂದ ಬಿಡುಗಡೆಯಾದ ಅನುದಾನವನ್ನು ತಮ್ಮ ಮಗನಾದ ಶ್ರೀ ಭೀಮರಾಯ ತಿಪ್ಪಣ್ಣ ಸಾ॥ ತುರುಕನದೊಡ್ಡಿ, ಹೆಸರಿನಲ್ಲಿ ಚೆಕ್ ಪಡೆದು ತಮ್ಮ ಬ್ಯಾಂಕ್ ಖಾತೆ ಮೂಲಕ ಒಟ್ಟು 67,930/-ರೂಗಳನ್ನು ನಗದೀಕರಿಸಿಕೊಂಡಿರುವ ಆರೋಪವು ಸಾಬೀತಾಗಿರುವುದರಿಂದ **ಸರ್ಕಾರವು ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮದ 1993ರ ಪ್ರಕರಣ 43(ಎ) ಮತ್ತು 48(4) ರನ್ವಯ** ಶ್ರೀಮತಿ ರತ್ನಮ್ಮ ಗಂಡ ತಿಪ್ಪಣ್ಣ ಸಾ॥ ತುರುಕನದೊಡ್ಡಿ, ಅಜಾಲಪೂರಗ್ರಾಮ ಪಂಚಾಯಿತಿ, ರವರನ್ನು ಅಧ್ಯಕ್ಷ ಸ್ಥಾನ ಮತ್ತು ಸದಸ್ಯ ಸ್ಥಾನದಿಂದ ತೆಗೆದು ಹಾಕಲು ನಿರ್ಣಯಿಸಿದೆ.

ಅದರಂತೆ ಈ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 392 ಗ್ರಾಪಂಅ 2017,**
**ಬೆಂಗಳೂರು, ದಿನಾಂಕ: 14-10-2019.**

ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ, ಲಭ್ಯವಿರುವ ಎಲ್ಲಾ ದಾಖಲಾತಿಗಳನ್ನು ಪರಿಶೀಲಿಸಲಾಗಿ, ಆಪಾದಿತ ಸದಸ್ಯರುಗಳಾದ ಶ್ರೀಮತಿ ರತ್ನಮ್ಮ ಗಂಡ ತಿಪ್ಪಣ್ಣ, ಅಧ್ಯಕ್ಷರು, ಅಜಾಲಪೂರ ಗ್ರಾಮ ಪಂಚಾಯಿತಿ, ಯಾದಗಿರಿ ತಾಲ್ಲೂಕು, ಯಾದಗಿರಿ ಜಿಲ್ಲೆ ಇವರುಗಳು 13ನೇ ಹಣಕಾಸು ಮತ್ತು ಕರವಸೂಲಿ ಯೋಜನೆಯಲ್ಲಿ ಗ್ರಾಮ ಪಂಚಾಯಿತಿಯಿಂದ ಬಿಡುಗಡೆಯಾದ ಅನುದಾನವನ್ನು ತಮ್ಮ ಮಗನಾದ ಶ್ರೀ ಭೀಮರಾಯ ತಿಪ್ಪಣ್ಣ ಸಾ॥ ತುರುಕನದೊಡ್ಡಿ, ಹೆಸರಿನಲ್ಲಿ ಚೆಕ್ ಪಡೆದು ತಮ್ಮ ಬ್ಯಾಂಕ್ ಖಾತೆ ಮೂಲಕ ಒಟ್ಟು 67,930/-ರೂಗಳನ್ನು ನಗದೀಕರಿಸಿಕೊಂಡಿರುವ ಆರೋಪವು ಸಾಬೀತಾಗಿರುತ್ತದೆ. ಆದ್ದರಿಂದ ಇವರ ವಿರುದ್ಧ **ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮದ 1993ರ ಪ್ರಕರಣ 43(ಎ) ಮತ್ತು 48(4) ರನ್ವಯ** ಶ್ರೀಮತಿ ರತ್ನಮ್ಮ ಗಂಡ ತಿಪ್ಪಣ್ಣ ಸಾ॥ ತುರುಕನದೊಡ್ಡಿ, ಅಜಾಲಪೂರ ಗ್ರಾಮ ಪಂಚಾಯಿತಿ, ರವರನ್ನು ಅಜಲಾಪೂರ ಗ್ರಾಮ ಪಂಚಾಯತಿಯ ಅಧ್ಯಕ್ಷ ಸ್ಥಾನ ಮತ್ತು ಸದಸ್ಯ ಸ್ಥಾನದಿಂದ ತೆಗೆದುಹಾಕಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

Narayana DG
14/10/19

(ಡಿ.ಜಿ. ನಾರಾಯಣ)
ಉಪನಿರ್ದೇಶಕರು ಮತ್ತು ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ,(ಗ್ರಾ.ಪಂ.)(ಪ್ರ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

**ಗೆ:**

1) ಕಾರ್ಯದರ್ಶಿ, ರಾಜ್ಯ ಚುನಾವಣಾ ಆಯೋಗ, ಕನ್ನಿಂಗ್ ಹ್ಯಾಂ ರಸ್ತೆ, ಬೆಂಗಳೂರು.
2) ಮುಖ್ಯ ಕಾರ್ಯನಿರ್ವಾಹಕಾಧಿಕಾರಿ, ಜಿಲ್ಲಾ ಪಂಚಾಯಿತಿ, ಯಾದಗಿರಿ ಜಿಲ್ಲೆ.

3) ಕಾರ್ಯನಿರ್ವಾಹಕಾಧಿಕಾರಿ, ತಾಲ್ಲೂಕು ಪಂಚಾಯಿತಿ ಯಾದಗಿರಿ, ಯಾದಿಗಿರಿ ಜಿಲ್ಲೆ.
4) ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಅಜಾಲಪೂರ ಗ್ರಾಮ ಪಂಚಾಯಿತಿ, ಯಾದಗಿರಿ ತಾಲ್ಲೂಕು, ಯಾದಗಿರಿ ಜಿಲ್ಲೆ.
5) ಶ್ರೀಮತಿ ರತ್ನಮ್ಮ ಗಂಡ ತಿಪ್ಪಣ್ಣ ಸಾ॥ ತುರುಕನದೊಡ್ಡಿ, ಅಜಾಲಪೂರ ಗ್ರಾಮ ಪಂಚಾಯಿತಿ, ಯಾದಗಿರಿ ತಾಲ್ಲೂಕು, ಯಾದಗಿರಿ ಜಿಲ್ಲೆ.
6) ಗಣಕ ಕೋಶ-ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು.
7) ಕಛೇರಿ ಪ್ರತಿ/ಹೆಚ್ಚುವರಿ ಪ್ರತಿ.

<u>ಪ್ರತಿಯನ್ನು ಮಾಹಿತಿಗಾಗಿ:</u>

1) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಆಪ್ತಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
2) ಸರ್ಕಾರದ ಕಾರ್ಯದರ್ಶಿಗಳು (ಪಂ.ರಾಜ್), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ರವರ ಆಪ್ತ ಕಾರ್ಯದರ್ಶಿ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
3) ನಿರ್ದೇಶಕರು(ಪಂ.ರಾಜ್-1), ಗ್ರಾ.ಅ ಮತ್ತು ಪಂ.ರಾಜ್ ಇಲಾಖೆ ಇವರ ಆಪ್ತ ಸಹಾಯಕರು.